1	2	3	4	5
ಅರಸೀಕೆರೆ	2000	6	7	36
	2001	9	12	55
	2002	10	11	58
ಕಡೂರು	2000	36	5	57
	2001	30	8	39
	2002	47	81	100

ಆ) ತುಮಕೂರು-ಅರಸೀಕೆರೆ-ಶಿವಮೊಗ್ಗ ರಸ್ತೆ ಹೆದ್ದಾರಿಯಲ್ಲಿಯ ತುಮಕೂರು, ತರೀಕೆರೆ ಮತ್ತು ಶಿವಮೊಗ್ಗದಲ್ಲಿರುವ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸಾಲಯ (Trauma Centre) ಸೌಲಭ್ಯವಿರುತ್ತದೆ.

ಇ) ಪ್ರಸ್ತಾಪಿಸಿರುವ 'ಕ್ಷೇಮ' ಯೋಜನೆಯಡಿಯಲ್ಲಿ ತುಮಕೂರು-ಶಿವಮೊಗ್ಗ ಪಟ್ಟಣಗಳ ಮಧ್ಯೆ ಬರುವ ಗುಬ್ಬಿ, ತಿಪಟೂರು, ಅರಸೀಕೆರೆ ಹಾಗೂ ಕಡೂರು ಪಟ್ಟಣಗಳಲ್ಲಿ ತುರ್ತು ಚಿಕಿತ್ಸಾಲಯಗಳನ್ನು (ಟ್ರಾಮಾ ಘಟಕ) ನಿರ್ಮಿಸಲು ಪರಿಗಣಿಸಲಾಗುತ್ತದೆ.

ಈ) ಕ್ಷೇಮಾ ಯೋಜನೆಗೆ ಅನುಮೋದನೆ ದೊರೆತಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕುವೆಂಪು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಕೇಂದ್ರದ ಪ್ರಾರಂಭ

277 (272) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) - ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕುವೆಂಪು ವಿಶ್ವ ವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಕೇಂದ್ರವನ್ನು ತೆರೆಯಲಾಗಿದೆಯೇ ; ಹಾಗಿದ್ದಲ್ಲಿ, ಎಲ್ಲಿ ತೆರೆಯಲಾಗಿದೆ ; ಇಲ್ಲದಿದ್ದಲ್ಲಿ, ತೆರೆಯುವ ಬಗ್ಗೆ ಸರ್ಕಾರದ ಪರಿಶೀಲನೆ ಇದೆಯೇ ;

ಆ) ಕುವೆಂಪು ವಿಶ್ವವಿದ್ಯಾಲಯದಿಂದ ಯಾವ ಯಾವ ಜಿಲ್ಲೆಗಳಲ್ಲಿ ಸ್ನಾತಕೋತ್ತರ ಪದವಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ; (ವಿವರ ನೀಡುವುದು) ;

ಇ) ಕುವೆಂಪು ವಿಶ್ವವಿದ್ಯಾಲಯವು ಕಡೂರು ತಾಲ್ಲೂಕಿನಲ್ಲಿ ಸ್ನಾತಕೋತ್ತರ ಪದವಿ ಕೇಂದ್ರವನ್ನು ತೆರೆಯುವ ಬಗ್ಗೆ ಜಮೀನು ನೀಡುವಂತೆ ಕೋರಿ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿರುತ್ತಾರೆಯೇ; ಸಲ್ಲಿಸಿದ್ದಲ್ಲಿ ಕಂದಾಯ ಇಲಾಖೆಯಿಂದ ಜಮೀನು ಮಂಜೂರು ಮಾಡಲಾಗಿದೆಯೇ?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ

ಇಂತಹ ಯಾವುದೇ ಪ್ರಸ್ತಾವನೆ ಪರಿಶೀಲನೆಯಲ್ಲಿಲ್ಲ.

ಆ) 1) ಶಿವಮೊಗ್ಗ ಜಿಲ್ಲೆ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಎಂ.ಎ ಹಿಂದಿ ಮತ್ತು

2) ದಾವಣಗೆರೆ ಜಿಲ್ಲೆ ದಾವಣಗೆರೆಯ ತೋಳಹುಣಸೆ ಸ್ನಾತಕೋತ್ತರ ಕೇಂದ್ರದಲ್ಲಿ ಹಾಗೂ ಎಂಎ (ಅರ್ಥಶಾಸ್ತ್ರ), ಎಂ.ಕಾ.ಂ, ಎಂಬಿಎ ಹಾಗೂ ಎಂಎಸ್ಸಿ (ಮೈಕ್ರೋಬಯಾಲಜಿ) ಮತ್ತು ಎಂಎಸ್ಸಿ (ಬಯೋಕೆಮಿಸ್ಟ್ರಿ) ವಿಷಯಗಳು

ಯುಬಿಡಿಟಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಎಂ.ಟೆಕ್(PEST) ಸ್ನಾತಕೋತ್ತರ ಕೋರ್ಸು

ಇ) ಹೌದು. ಆದರೆ ಜಮೀನು ಮಂಜೂರು ಆಗಿರುವುದಿಲ್ಲ. ಈ ಮಧ್ಯೆ ಕಡೂರು ತಾಲ್ಲೂಕಿನಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸುವ ವಿಚಾರವನ್ನು ಸಧ್ಯಕ್ಕೆ ಕೈಬಿಟ್ಟಿರುವುದರಿಂದ, ಈ ವಿಷಯದಲ್ಲಿ ಮುಂದುವರೆದಿರುವುದಿಲ್ಲ.

ಗ್ರಾಮ ಪಂಚಾಯಿತಿಗಳಲ್ಲಿ ಗ್ರಂಥಾಲಯಗಳು

278 (106) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) - ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈವರೆಗೆ ಎಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಗ್ರಂಥಾಲಯಗಳು ಮಂಜೂರಾಗಿವೆ ; (ಜಿಲ್ಲಾವಾರು ಮಾಹಿತಿ ಕೊಡುವುದು) ;

ಆ) ಪ್ರಸಕ್ತ ಸಾಲಿನಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳಿಗೆ ಗ್ರಂಥಾಲಯಗಳನ್ನು ಮಂಜೂರು ಮಾಡಲಾಗಿದೆ ; ಇದರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಎಷ್ಟು ಮಂಜೂರು ಮಾಡಲಾಗಿದೆ; ತಾಲ್ಲೂಕುವಾರು ಎಷ್ಟು ಹಂಚಿಕೆ ಮಾಡಲಾಗಿದೆ ;

ಇ) ಈ ಗ್ರಂಥಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮೇಲ್ವಿಚಾರಕರ ಸಂಖ್ಯೆ ಎಷ್ಟು ; ಇವರಿಗೆ ನೀಡಲಾಗುತ್ತಿರುವ ಮಾಸಿಕ ಸಂಭಾವನೆ ಎಷ್ಟು ; ಇದನ್ನು ಹೆಚ್ಚಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಈವರೆಗೆ ಒಟ್ಟು 3251 ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಗ್ರಂಥಾಲಯಗಳು ಮಂಜೂರಾಗಿವೆ. ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ.

ಆ) ಪ್ರಸ್ತುತ ಸಾಲಿನಲ್ಲಿ ಒಟ್ಟು 500 ಗ್ರಾಮ ಪಂಚಾಯಿತಿಗಳಿಗೆ ಗ್ರಂಥಾಲಯಗಳು ಮಂಜೂರು ಮಾಡಲಾಗಿದೆ. ಇವುಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 12 ಗ್ರಂಥಾಲಯಗಳು ಮಂಜೂರು ಮಾಡಲಾಗಿದೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

1) ಕನಕಪುರ - 3

2) ಮಾಗಡಿ - 3

3) ದೊಡ್ಡಬಳ್ಳಾಪುರ - 2